**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 112/2021**

ಪಿಡಬ್ಲ್ಯೂ2 1

| | |
|---|---|
| ಸಾಕ್ಷಿದಾರರ ಹೆಸರು | ಧನಂಜಯ |
| ತಂದೆಯ ಹೆಸರು | ಸುಬ್ಬೇಗೌಡ |
| ವಯಸ್ಸು | 43 ವರ್ಷ |
| ಕೆಲಸ | ಮುಖ್ಯ ಪೇದೆ, ಕೆ.ಆರ್.ನಗರ |
| ವಾಸ | ಕೆ.ಆರ್.ನಗರ |

**ದಿನಾಂಕ 20.03.2024 ರಂದು ಸಾಕ್ಷಿಯನ್ನು ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಯನ್ನು ಸಾಕ್ಷಿ ಮಾನ್ಯ ಎಪಿಪಿಯವರಿಂದ**

2019 ರಿಂದ ಇಲ್ಲಿಯವರೆಗೂ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ28.03.2019 ರಂದು ಬೆಳಿಗ್ಗೆ 11 ಗಂಟೆಗೆ ನಾನು ಪ್ರಭಾರದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 99/19 ಕಲಂ 379 ಐ.ಪಿ.ಸಿ ಅಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಮೇಲಾಧಿಕಾರಿಗೂ ನೀಡಿ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯ ನಿಪಿ 1 ದೂರನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಪ್ರ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಸ್ಥಳ ಮಹಜರ್ ಮದ್ಯಾಹ್ನ 2.30 ಗಂಟೆಯಿಂದ 3 ಗಂಟೆಯವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ 2 ಮಹಜರ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 12 ರವರಿಗೆ ನೀಡಿರುತ್ತೇನೆ.

**ಮರು ವಿಚಾರಣೆ** ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಪವಿತ್ರ.ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ